


# ಯಾರು ಅರ್ಹರು?

■ ಸಿ.ಎನ್. ಮುಕ್ತಾ

ಬಹಳ ವರ್ಷಗಳ ಹಿಂದೆ ಕರ್ನಾಟಕದಲ್ಲಿ ಮೂವರು ಸ್ನೇಹಿತರಿದ್ದರು. ಅವರು ತಮ್ಮ ತಮ್ಮ ಕುಲದ ವೃತ್ತಿಗಳನ್ನು ಮಾಡಿಕೊಂಡು ಹಾಯಾಗಿದ್ದರು. ಮುಕುಂದ ಅಂದವಾಗಿ ಬಟ್ಟೆ ಹೊಲಿಯುತ್ತಿದ್ದ. ವೀರಾಚಾರಿ ಚಂದದ ಒಡವೆಗಳನ್ನು ಮಾಡುತ್ತಿದ್ದ. ವೆಂಕಟೇಶ ಒಳ್ಳೆಯ ವಿಗ್ರಹಗಳನ್ನು ಮಾಡಬಲ್ಲವನಾಗಿದ್ದ. ಹಳ್ಳಿಯಲ್ಲಿ ತೀವ್ರ ಬರ ಕಾಣಿಸಿಕೊಂಡಿದ್ದರಿಂದ ಮೂವರೂ ತಮ್ಮ ತಮ್ಮ ವಸ್ತುಗಳ ಜೊತೆ, ಕೆಲಸ ಹುಡುಕಿಕೊಂಡು ಹೊರಟರು. ದಾರಿಯಲ್ಲಿ ಅವರ ಜೊತೆ ಒಬ್ಬ ಸನ್ಯಾಸಿ ಸೇರಿಕೊಂಡ.

ನಾಲ್ವರೂ ನಡೆದೂ ನಡೆದೂ ಒಂದು ಹಳ್ಳಿ ತಲುಪಿದರು. ರಾತ್ರಿಯಾಗಿದ್ದರಿಂದ, ತಾವು ತಂದಿದ್ದ ಬುತ್ತಿ ತಿಂದು ಒಂದು ಮರದ ಕೆಳಗೆ ಮಲಗಿದರು. ಆಗ ಸನ್ಯಾಸಿ ಹೇಳಿದ.

‘ನಿಮ್ಮೆಲ್ಲರ ಬಳಿಯೂ ಬೆಲೆ ಬಾಳುವ ವಸ್ತುಗಳಿವೆ. ನಾವೆಲ್ಲರೂ ನಿದ್ರೆಗೆ ಜಾರಿದರೆ, ಯಾರಾದರೂ ಕಳ್ಳಕಾಕರು ಅವುಗಳನ್ನು ಕದಿಯಬಹುದು. ಆದ್ದರಿಂದ ಸರದಿಯಂತೆ ಕಾವಲು ಕಾಯೋಣ.’

ಎಲ್ಲರಿಗೂ ಸನ್ಯಾಸಿಯ ಮಾತು ಒಪ್ಪಿಗೆಯಾಯಿತು. ವೆಂಕಟೇಶ ತಾನು ಮೊದಲು ಕಾವಲು ಕಾಯುವುದಾಗಿ ಹೇಳಿದ. ಉಳಿದವರು ನಿದ್ರೆಗೆ ಜಾರಿದರು. ಆಗ ಶಿಲ್ಪಿ ವೆಂಕಟೇಶನ ಕಣ್ಣಿಗೆ ಒಂದು ಕಲ್ಲು ಕಾಣಿಸಿತು. ವ್ಯರ್ಥವಾಗಿ ಕಾಲಕಳೆಯಲು ಇಚ್ಛಿಸದೆ ಆ ಕಲ್ಲಿನಿಂದ ಅತ್ಯಂತ ಸುಂದರಿಯಾದ ಒಬ್ಬ ಯುವತಿಯ ವಿಗ್ರಹವನ್ನು ಕೆತ್ತಿದ.

ಶಿಲ್ಪಿ ಮಲಗಿದ ನಂತರ ಕಾವಲು ಕಾಯುವ ಸರದಿ ಮುಕುಂದನದಾಯಿತು. ದರ್ಜಿ ಮುಕುಂದ ತಾನು ತಂದಿದ್ದ ಬಟ್ಟೆ ಉಪಯೋಗಿಸಿ ಒಂದು ಚಂದದ, ಮದುಮಗಳ ಉಡುಪನ್ನು ಹೊಲಿದು, ವಿಗ್ರಹವನ್ನು ಅಲಂಕರಿಸಿದ.

ದರ್ಜಿ ಮುಕುಂದನ ಸರದಿ ಮುಗಿದೊಡನೆ ವೀರಾಚಾರಿ ತನ್ನ ಪಾಳಿ ಆರಂಭಿಸಿದ. ತನ್ನ ಬಳಿ ಇದ್ದ ಚಿನ್ನದಿಂದ ಸರ, ಬಳೆ, ಉಂಗುರ, ಕಾಲು ಚೈನು ಮುಂತಾದವನ್ನು ತಯಾರಿಸಿ, ವಿಗ್ರಹಕ್ಕೆ ತೊಡಿಸಿ ಅದರ ಸೊಬಗು ಹೆಚ್ಚುವಂತೆ ಮಾಡಿದ.

ಕೊನೆಯ ಪಾಳಿ ಸನ್ಯಾಸಿಯದು. ಅವನು ಸುಂದರವಾದ ವಿಗ್ರಹವನ್ನು ನೋಡಿ, ‘ಈ ವಿಗ್ರಹಕ್ಕೆ ಜೀವ ಕೊಟ್ಟರೆ ಚೆನ್ನಾಗಿರುತ್ತದೆ’ ಎಂದುಕೊಂಡು, ಕಣ್ಮುಚ್ಚಿಕೊಂಡು ಕೆಲವು ಮಂತ್ರಗಳನ್ನು ಪಠಿಸಿದ. ತಕ್ಷಣವೇ ಆ ವಿಗ್ರಹಕ್ಕೆ ಜೀವ ಬಂತು. ಆ ತರುಣಿಯ ಸೌಂದರ್ಯಕ್ಕೆ ನಾಲ್ವರೂ ಮನಸೋತು ಅವಳನ್ನು ವಿವಾಹವಾಗಲು ಬಯಸಿದರು. ಅವರಲ್ಲಿ ಜಗಳ ಶುರುವಾಯಿತು.

ಆ ವೇಳೆಗೆ ಬೆಳಗಾಗಿತ್ತು. ಈ ನಾಲ್ವರ ಜಗಳ ಕೇಳಿ ಓಡಾಡುತ್ತಿದ್ದ ಜನ ಗುಂಪು ಸೇರಿದರು. ಪ್ರತಿಯೊಬ್ಬರೂ ತಮ್ಮ ತಮ್ಮ ವಾದ ಸಮರ್ಥಿಸಿಕೊಳ್ಳಲಾರಂಭಿಸಿದರು. ಹಳ್ಳಿಯವರೆಲ್ಲಾ ಸೇರಿ ಅವರನ್ನು ಹಳ್ಳಿಯ ಮುಖ್ಯಸ್ಥನ ಬಳಿ ಕರೆದೊಯ್ದು ‘ದಯವಿಟ್ಟು ಇವರ ಜಗಳವನ್ನು ಆಲಿಸಿ, ಸಮಸ್ಯೆಗೆ ಪರಿಹಾರ ಸೂಚಿಸಿ’ ಎಂದು ಕೇಳಿಕೊಂಡರು.

ಅವರ ಸಮಸ್ಯೆಯನ್ನು ಆಲಿಸಿದ ಮುಖ್ಯಸ್ಥ ‘ನಮ್ಮ ರೀತಿ ರಿವಾಜು ತಿಳಿದಿದ್ದರೆ ನೀವು ಜಗಳವನ್ನೇ ಆಡುತ್ತಿರಲಿಲ್ಲ. ತಂದೆಯಾದವನು ಮಕ್ಕಳ ಜನನಕ್ಕೆ ಕಾರಣನಾಗುತ್ತಾನೆ. ಶಿಲ್ಪಿ ಹಾಗೂ ಸನ್ಯಾಸಿ ಈ ಯುವತಿಯ ಜನನಕ್ಕೆ ಕಾರಣವಾಗಿರುವುದರಿಂದ ತಂದೆಯ ಸಮಾನರು. ಅವರು ಈ ತರುಣಿಯನ್ನು ವಿವಾಹವಾಗುವಂತಿಲ್ಲ. ಸೋದರಮಾವ ಮದುವೆಯ ಹೆಣ್ಣಿಗೆ ವಸ್ತ್ರ ನೀಡಬೇಕು. ಆದ್ದರಿಂದ ದರ್ಜಿ ಮಾವನಿಗೆ ಸಮಾನ.’

‘ಹಾಗಾದರೆ ದರ್ಜಿ ತರುಣಿಯನ್ನು ವರಿಸುವಂತಿಲ್ಲವೆ?’

‘ಇಲ್ಲ. ಮದುವೆ ಹೆಣ್ಣಿಗೆ ವರ ಆಭರಣ ತರಬೇಕು. ಚಿನಿವಾರ ವೀರಾಚಾರಿ. ಆ ಕೆಲಸ ಮಾಡಿದ್ದಾನೆ. ಆದ್ದರಿಂದ ವೀರಾಚಾರಿ ಮಾತ್ರ ಈ ತರುಣಿಯನ್ನು ಮದುವೆಯಾಗಲು ಅರ್ಹನಾಗಿದ್ದಾನೆ.’

ಎಲ್ಲರಿಗೂ ಆ ಮುಖ್ಯಸ್ಥನ ತೀರ್ಪು ಹಿಡಿಸಿತು. ಊರಿನವರ ಮುಂದೆ ಅಕ್ಕಸಾಲಿ ವೀರಾಚಾರಿ ಆ ತರುಣಿಯ ಕೈ ಹಿಡಿದ.

(ಆಧಾರ)

■